ಸಾಕ್ಷಿಯ ಹೆಸರುಃ ಎಸ್.ಎಲ್.ಗೌಡಪ್ಪ

ದಿನಾಂಕ 06-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಕೆ.ಎನ್. ವಕೀಲರಿಂದಃ

ನಾನು ಬಿ.ಎ. ಓದಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನಗೆ ವ್ಯವಸಾಯದ ಆದಾಯ ಹೊರತುಪಡಿಸಿ, ಬೇರೆ ಆದಾಯ ಇಲ್ಲ. ನನಗೆ 5 ಎಕರೆ ಜಮೀನು ಇದೆ. ನಾನು ವಾರ್ಷಿಕವಾಗಿ ರೂ.2 ರಿಂದ 3 ಲಕ್ಷ ಆದಾಯವನ್ನು ಹೊಂದಿರುತ್ತೇನೆ. ಇಷ್ಟು ಆದಾಯ ಹೊಂದಲು, ಕನಿಷ್ಟ ರೂ.1 ಲಕ್ಷ ಖರ್ಚು ಮಾಡಬೇಕಾಗುತ್ತದೆ ಎಂದರೆ ಸರಿ. ಕಲವೊಂದು ಸಂದರ್ಭದಲ್ಲಿ ಇದಕ್ಕಿಂತ ಹೆಚ್ಚು ಖರ್ಚಾಗುತ್ತದೆ ಎಂದರೆ ಸಾಕ್ಷಿ ನಾವು ಸ್ವತಃ ವ್ಯವಸಾಯ ಮಾಡುವುದರಿಂದ ಇಷ್ಟೇ ಖರ್ಚು ಆಗುತ್ತದೆ ಎನ್ನುತ್ತಾರೆ. ನನ್ನ ಬಳಿ ಅಂತ್ಯೋದಯ ಕಾರ್ಡ್ ಇದೆ. ಯಾರು ಆರ್ಥಿಕವಾಗಿ ಸಬಲರಿರುವುದಿಲ್ಲ ಅಂತವರಿಗೆ ಅಂತ್ಯೋದಯ ಕಾರ್ಡ್ ನೀಡಲಾಗುತ್ತದೆ ಎಂದರೆ ಸರಿ.

2) ಆರೋಪಿ ನನಗೆ ಸುಮಾರು 15 ವರ್ಷಗಳಿಂದ ಪರಿಚಯ. ಆರೋಪಿಯ ತಂದೆ-ತಾಯಿ ನನಗೆ ಪರಿಚಯ. ಅವರ ಜಮೀನು ನನ್ನ ಜಮೀನಿನ ಪಕ್ಕದಲ್ಲಿದೆ. ನನ್ನ ಜಮೀನಿನ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಸಾಕ್ಷಿ ಮುಂದುವರಿದು ಜಮೀನು ನನ್ನ, ನನ್ನ ಹೆಂಡತಿ ಹಾಗೂ ನನ್ನ ಮಗನ ಹೆಸರಿನಲ್ಲೂ ಜಮೀನು ಇದೆ ಎನ್ನುತ್ತಾರೆ. ಆರೋಪಿಯ ತಂದೆ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಆರೋಪಿಯ ಕುಟುಂಬದವರು ಹಾಗೂ ನಮ್ಮ ಕುಟುಂಬದವರು ಅವಿನಾಭಾವ ಸಂಬಂಧ ಹೊಂದಿ ಒಬ್ಬರ ಮನೆಗೆ ಒಬ್ಬರು ಹೋಗುತ್ತಿದ್ದೆವು ಎಂದರೆ ಸರಿ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಚೆಕ್ ಪುಸ್ತಕ ಮತ್ತು ಪಾಸ್ ಪುಸ್ತಕಗಳನ್ನು ಟಿ.ವಿ.ಯ ಮೇಲೆ ಇಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಳೇ ಮೈಸೂರು ಭಾಗದಲ್ಲಿ ಬಡ್ಡಿ ವ್ಯವಹಾರ ಸರ್ವೆ ಸಮಾನ್ಯ ಎಂದರೆ ನನಗೆ ಗೊತ್ತಿಲ್ಲ.

3) ಹಳೇ ಮೈಸೂರು ಭಾಗದಲ್ಲಿ ಮೊದಲು ವಾರ್ಷಿಕವಾಗಿ ಶೇ.40 ರಷ್ಟು ಬಡ್ಡಿ ನಡೆಯುತ್ತಿದ್ದು, ಈಗ ಮಾಸಿಕವಾಗಿ ಶೇ.3 ರಂತೆ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಅಸಲನ್ನು ನೀಡುವ ವ್ಯಕ್ತಿ ಬಡ್ಡಿಯನ್ನು ಅಪೇಕ್ಷೆ ಮಾಡುವುದು ವ್ಯವಹಾರವನ್ನು ತಿಳಿದುಕೊಂಡಿರುವ ವ್ಯಕ್ತಿಯ ಗುಣ ಎಂದರೆ ಸಾಕ್ಷಿ ಅದು ಅವರವರ ಇಷ್ಟ ಎನ್ನುತ್ತಾರೆ. ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರು ಎಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ, ಆದರೆ ಅವರು ವ್ಯವಸಾಯ ಮಾಡುತ್ತಿದ್ದರು. ಸಾಮಾನ್ಯವಾಗಿ ಸಾಲ ನೀಡುವ ವ್ಯಕ್ತಿ ಸಾಲ ಪಡೆಯುವ ವ್ಯಕ್ತಿ ಯಾವ ಕಾರಣಕ್ಕಾಗಿ ಸಾಲ ಪಡೆಯುತ್ತಾರೆ ಎಂದು ತಿಳಿದುಕೊಳ್ಳುತ್ತಾರೆ ಎಂದರೆ ಸರಿ. ಆರೋಪಿಯನ್ನು ನಾನು ವಿಚಾರಿಸಿದಾಗ, ತಮ್ಮ ತಂದೆಗೆ ತೊಂದರೆ ಇದೆ ಹಾಗೂ ತುಂಬಾ ಕೈ ಸಾಲ ಇದೆ ಎಂದು ಹೇಳಿ ನನ್ನಿಂದ ಹಣವನ್ನು ಪಡೆದಿದ್ದರು. ನಮ್ಮ ಹಳೇ ಮೈಸೂರು ಭಾಗದಲ್ಲಿ ಯಾರಿಗಾದರೂ ಸಾಲವನ್ನು ನೀಡುವಾಗ ಯಾರಾದರೂ ಒಬ್ಬರನ್ನು ಮಧ್ಯವಾಗಿ ಇಟ್ಟುಕೊಂಡು ಸಾಲವನ್ನು ನೀಡುವುದು ವಾಡಿಕೆ ಇದೆ ಎಂದರೆ ಸರಿಯಲ್ಲ. ಆರೋಪಿ ಯಾವ ಕಾರಣಕ್ಕಾಗಿ ಹಣವನ್ನು ಪಡೆದಿದ್ದರು ಎಂದು ದೂರಿನಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿ ದೂರಿನಲ್ಲಿ ಹೇಳಿ ಬರೆಸಿಲ್ಲ ಎನ್ನುತ್ತಾರೆ. ಆರೋಪಿಗೆ ನಾನು ಹಣವನ್ನೇ ನೀಡಿಲ್ಲದ ಕಾರಣ ನಾನು ದೂರಿನಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ.

4) ಸಾಮಾನ್ಯವಾಗಿ ವಾಡಿಕೆಯಂತೆ ಯಾವುದೋ ವ್ಯಕ್ತಿ ಸಾಲಗಾರನಾಗಿದ್ದಾಗ ಮುಲಾಜಿಗೆ ಒಳಪಟ್ಟು ಬೇರೆಯವರಿಗೆ ಸಾಲ ಕೊಡುವುದು ವಾಡಿಕೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಬ್ಯಾಂಕಿನಲ್ಲಿ ವ್ಯವಹಾರ ಮಾಡುತ್ತೇನೆ. ನಾನು ಬ್ಯಾಂಕ್ ಆಫ್ ಬರೋಡದಲ್ಲಿ ಖಾತೆಯನ್ನು ಹೊಂದಿರುತ್ತೇನೆ. ದಿನಾಂಕ:13.10.2020 ರಂದು ನಾನು ಹೇಳುತ್ತಿರುವ ವ್ಯವಹಾರದ ದಿನಾಂಕದ ಸಮಯದಲ್ಲಿ ಕರೋನಾ ಸಾಂಕ್ರಾಮಿಕ ರೋಗ ವ್ಯಾಪಕವಾಗಿ ಹರಡಿತ್ತು ಎಂದರೆ ಸರಿ. ಆ ಸಮಯದಲ್ಲಿ ಹಳ್ಳಿ ಹಳ್ಳಿಗಳ ಮಧ್ಯೆ ಅಂತರವನ್ನು ಕಾಯ್ದುಕೊಳ್ಳಬೇಕೆಂದು ಜೆ.ಸಿ.ಬಿ.ಯಿಂದ ರಸ್ತೆಗಳನ್ನು ಅಗೆದಿದ್ದರು

ಎಂದರೆ ಸರಿಯಲ್ಲ. ಯಾವುದೇ ವ್ಯಕ್ತಿ ಮನೆಯಿಂದ ಹೊರಗಡೆ ಬಂದು ವ್ಯವಹಾರ ಮಾಡಬಾರದು ಎಂದು ಸುತ್ತೋಲೆ ಇತ್ತು ಎಂದರೆ ಸುಳ್ಳು.

5) ಯಾವ ದಿನಾಂಕದಂದು ಆರೋಪಿ ನಿಮ್ಮಿಂದ ಹಣ ಕೇಳಲು ಬಂದಿದ್ದರು ಎಂದರೆ ಸಾಕ್ಷಿ ತಿಂಗಳು ಮತ್ತು ವರ್ಷ ಹೇಳಲು ಬರುತ್ತದೆ ಆದರೆ ದಿನಾಂಕ ಹೇಳಲು ಬರುವುದಿಲ್ಲ ಎನ್ನುತ್ತಾರೆ. ಸೆಪ್ಟೆಂಬರ್ 2020 ರಲ್ಲಿ ಆರೋಪಿ ಹಣ ಕೇಳಲು ಬಂದಿದ್ದರು.

ಈ ಹಂತದಲ್ಲಿ ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.